## ಮಾದರಿ ಪ್ರಶ್ನೆಪತ್ರಿಕೆ (1) ನೀಲಿನಕ್ಷೆ - 2024-25
## ದ್ವಿತೀಯ ಪಿಯುಸಿ ಐಚ್ಛಿಕ ಕನ್ನಡ (16)

| ಕ್ರ.ಸಂ | ಪಠ್ಯಗಳು | ಬೋಧನಾ ಅವಧಿ | ನಿಗಧಿಪಡಿಸಿದ ಅಂಕಗಳು | ಸ್ಮರಿಸು | | | | | ಗ್ರಹಿಸು | | | | ಅನ್ವಯಿಸು | | | | ವಿಶ್ಲೇಷಿಸು ಮೌಲ್ಯಮಾಪನ ಮಾಡು ಸೃಜಿಸು | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 1 | 2 | 3 | 4 | 1 | 2 | 3 | 4 | 1 | 2 | 3 | 4 |
| 01 | ಚಂಪೂ-ಪಂಪ | **10** | **10** | **01** | **01** | | | | | | **01** | | | | | **01** | | | | |
| 02 | ಚಂಪೂ-ಷಡಕ್ಷರದೇವ | **10** | **10** | **01** | **01** | | | | | | **01** | **01** | | | | | | | | |
| 03 | ರಗಳೆ - ಹರಿಹರ | **06** | **06** | **01** | **01** | | | | | | **01** | | | | | | | | | |
| 04 | ಷಟ್ಪದಿ - ಚಾಮರಸ | **07** | **07** | | | | | | | | | **01** | | | **01** | | | | | |
| 05 | ಶತಕ - ಚಿಕ್ಕುಪಾಧ್ಯಾಯ | **07** | **07** | **01** | **01** | | | | | | | **01** | | | | | | | | |
| 06 | ತ್ರಿಪದಿ- ಸರ್ವಜ್ಞ | **07** | **07** | | | | | | | | **01** | **01** | | | | | | | | |
| 07 | ಸಾಂಗತ್ಯ –ಸಂಚಿ ಹೊನ್ನಮ್ಮ | **07** | **07** | **01** | **01** | | | | | | | **01** | | | | | | | | |
| 08 | ನಾಗಿಯ ಕಥೆ-ಸು ರಂ. ಎಕ್ಕುಂಡಿ | **13** | **13** | **01** | **02** | | | | | | | **02** | | | | | | | | |
| 09 | ಜಲಗಾರ - ಕುವೆಂಪು | **27** | **27** | **03** | **03** | | | | | | **03** | **02** | | | | | **1** | | | |
| 10 | ಅಲಂಕಾರ | **08** | **08** | | | | | | | | | | | | | | | | | **02** |
| 11 | ಛಂದಸ್ಸು | **08** | **08** | | | | | | | | | | | | | | | | | **02** |
| 12 | ವ್ಯಾಕರಣ / ಭಾಷಾಭ್ಯಾಸ | **10** | **10** | **05** | | | | **01** | | | | | | | | | | | | |
| | | **120** | **120** | | | | | | | | | | | | | | | | | |
| ಒಟ್ಟು ಪ್ರಶ್ನೆಗಳು | | | | **14** | **10** | | | **01** | | | **07** | **09** | | | **01** | **01** | **1** | | | **04** |
| ಒಟ್ಟು ಅಂಕಗಳು | | | | **14** | **20** | | | **05** | | | **21** | **36** | | | **03** | **04** | **1** | | | **16** |
| ಉತ್ತರಿಸಬೇಕಾದ ಅಂಕಗಳು | | | | **14** | **20** | | | **05** | | | **12** | **20** | | | **03** | **04** | **1** | | | **08** |
| ಹೆಚ್ಚುವರಿ ಅಂಕಗಳು | | | | **00** | **00** | | | **0** | | | **09** | **16** | | | **00** | **00** | **1** | | | **08** |
| ಶೇಕಡಾವಾರು ಅಂಕಗಳು | | | | **32.5%** | | | | | **47.5%** | | | | **20%** | | | | | | | |

| | |
|---|---|
| **ಒಟ್ಟು ಪ್ರಶ್ನೆಗಳು** | **48** |
| **ಉತ್ತರಿಸಬೇಕಾದ ಪ್ರಶ್ನೆಗಳು** | **37** |
| **ಹೆಚ್ಚುವರಿ ಪ್ರಶ್ನೆಗಳು** | **11** |
| **ಒಟ್ಟು ಅಂಕಗಳು** | **120** |
| **ಉತ್ತರಿಸಬೇಕಾದ ಅಂಕಗಳು** | **80** |
| **ಹೆಚ್ಚುವರಿ ಅಂಕಗಳು** | **40** |

**ಕರ್ನಾಟಕ ಸರ್ಕಾರ**
**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ-(1)-2024-25**
**ವಿಷಯ- ಐಚ್ಚಿಕ ಕನ್ನಡ-(16)**

ತರಗತಿ -ದ್ವಿತೀಯ ಪಿಯುಸಿ ಒಟ್ಟು ಅಂಕಗಳು-80
ಸಮಯ-3 ಗಂಟೆ ಒಟ್ಟು ಪ್ರಶ್ನೆಗಳು 48

---

**ಸೂಚನೆ**:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

**ಅ-ವಿಭಾಗ**

**I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ.** 5x1-5

1. ನೀಲಾಂಜನೆಯ ಪ್ರತಿರೂಪವನ್ನು ಸೃಷ್ಟಿ ಮಾಡಿದವನು.
   ಅ) ಇಂದ್ರದೇವ ಆ) ಹರಿಕಾಂತ ಇ) ಆದಿದೇವ ಈ) ಸೋಮ ಪ್ರಭ
2. ದೇವಾಸುರರು ಈತನ ವಿರುದ್ಧ ಹೋರಾಡಲಾರರು.
   ಅ) ಅರ್ಜುನ ಆ) ಶಿವ ಇ) ಶಬರ ಈ) ಇಂದ್ರ
3. ಮಂಜು ಗೌಡ ಮಗಳನ್ನು ಇಲ್ಲಿ ಹುಡುಕುತ್ತಾನೆ.
   ಅ) ಊರು-ಕೇರಿಯಲ್ಲಿ ಆ) ತೋಟದಲ್ಲಿ ಇ) ಜಾತ್ರೆಯಲ್ಲಿ ಈ) ಬೆಟ್ಟದಲ್ಲಿ
4. ಈತ ಮಣ್ಣಿನ ಭೋಗಿ
   ಅ) ಜಲಗಾರ ಆ) ರೈತ ಇ) ಶಿವ ಈ) ಯುವಕ
5. ಜಲಗಾರನಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?
   ಅ) ಜಲಗಾರ ಪ್ರಕೃತಿ ಪ್ರೇಮಿ ಆ) ಜಲಗಾರನಿಗೆ ಕಾಯಕವೇ ಕೈಲಾಸ
   ಇ) ಜಲಗಾರನ ಶಿವನು ಗುಡಿಯಲಿದ್ದಾನೆ. ಈ) ಜಲಗಾರನು ದೀನ-ದುರ್ಬಲರ ಸೇವೆ ಮಾಡುತ್ತಾನೆ.

**II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ** 5x1-5

6. 'ಅಂಬರ' ಪದದ ಅರ್ಥ______
7. 'ಸ್ನೇಹ' ಪದದ ತದ್ಭವ ರೂಪ_____
8. 'ಹೊರಗಣ ' ಪದದ ವಿರುದ್ಧಾರ್ಥಕ ಪದ______
9. ದ್ವಿರುಕ್ತಿಗೆ ಇದು ಉದಾಹರಣೆ________
10. 'ಗುಣಾಭರಣ' ಪದದ ಬಿಡಿಸಿ ಬರೆದ ರೂಪ______

( ಒಳಗಣ, ಗುಣ + ಆಭರಣ, ದೆಸೆದೆಸೆಗೆ, ವಸ್ತ್ರ, ನೇಹ, ಹೊರಗೆ)

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** 5x1-5

| | |
|---|---|
| 11. ಅ. ದಿನಮಣಿ | -ವಿರುದ್ಧ |
| ಆ. ಊರು | -ಸೂರ್ಯ |
| ಇ. ಪರ | -ಗ್ರಾಮ-ತೊಡೆ |
| ಈ. ಮಿತ್ರ | -ಚಂದ್ರ |
| ಉ. ಭಕ್ತಿ | -ಸ್ನೇಹಿತ-ಗೆಳೆಯ |
| | -ಭಕುತಿ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** 5x1-5

12. ಗುಂಡಯ್ಯನ ಕಾಯಕ ಯಾವುದು?
13. ವಿದ್ಯಾರ್ಥಿಗೆ ಯಾರು ದೈವ?
14. ಕುಲಕೋಟಿಯನ್ನು ಉದ್ಧರಿಸುವವರು ಯಾರು?
15. ಬಡವರಿಗೆ ಯಾರು ಗತಿ?
16. ಅರುಣೋದಯ ಹೇಗೆ ಮೂಡುತ್ತಿದೆ?

## ಆ-ವಿಭಾಗ

**V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **4x2-8**

17. ಸಂಗೀತ ಪ್ರಸಂಗಕ್ಕೆ ಯಾವ ಯಾವ ವಂಶದ ರಾಜರು ಹಾಜರಿದ್ದರು?
18. ಮಣಲ ಲಿಂಗವನ್ನು ಅರ್ಜುನನು ಹೇಗೆ ಪೂಜಿಸಿದನು?
19. ಮಡಕೆಗಳನ್ನು ಮಾಡುವಾಗ ಗುಂಡಯ್ಯನಿಗೆ ಯಾವುದರೆಡೆಗೆ ಲಕ್ಷ್ಯವಿರಲಿಲ್ಲ?
20. ಸೇವಕ ಜನಕೆ ಹಾಗೂ ಧರೆಗೆ ದೈವ ಯಾರು?
21. ಸಂಸಾರದ ಬಂಧನ ಸಡಿಲವಾಗುವುದು ಯಾವಾಗ?

**VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **4x3-12**

22. ಪೊಸಯಿಸಿದಳಾಕೆ ನಾಟ್ಯಾಗಮಮಂ
23. ಪರಾಜಯಂ ತಗುಳ್ವುದು
24. ದೇವಾ ಎನಗಿದು ಕೌತುಕವೆಂದೆನೆ
25. ಕನಕವಹುದಲ್ಲದೇ ವೃಥಾ ಹಳೆಹಂಚು ಹೊನ್ನಹುದೆ.
26. ನಾಲಿಗಿಲ್ಲದೆ ಉಲಿವುದು

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **2x4-8**

27. ನೀಲಾಂಜನೆಯ ಸೌಂದರ್ಯ ಮತ್ತು ನೃತ್ಯದ ವಿಶೇಷತೆಯನ್ನು ವರ್ಣಿಸಿ.
28. ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮನು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ?
29. 'ಕೊಲ್ಲುವುದು ಧರ್ಮವೇ? ಕಳುವುದು ನೀತಿಯೆ?' ಈ ಶತಕದಲ್ಲಿ ಬೋಧಿಸಿದ ಬದುಕಿನ ಮೌಲ್ಯಗಳನ್ನು ವಿವರಿಸಿರಿ.
30. ಸರ್ವಜ್ಞನ ತ್ರಿಪದಿಗಳಲ್ಲಿ ತೋರುವ ಲೋಕನೀತಿಯನ್ನು ವಿವರಿಸಿರಿ.

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **1x4-4**

31. ಒಕ್ಕುದು ನೆತ್ತರ್ ಬಾಯಿಂ
    ಮಿಕ್ಕಲರ್ದುಸಿರಿಡುವ ಮೂಗಿನೆರಡುಂ ಕಡೆಯಿಂ
    ದಕ್ಕಟ ತಪ್ಪಾಯ್ತೆನುತಂ
    ಮುಕ್ಕಣ್ಣಂ ಮಱುಗಿ ಮನದೆ ಸಿಡಿಮಿಡಿಗೊಂಡಂ

32. ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ
    ಪೆಣ್ಣಲ್ಲವೆ ಪೊರೆದವಳು
    ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
    ಕಣ್ಣು ಕಾಣದ ಗಾವಿಲರು

## ಇ-ವಿಭಾಗ

**IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **1x2-2**

33. ಕರು ಏಕೆ ನಾಚಿಕೊಂಡಿತು?
34. ನಾಗಿಯ ಜೊತೆ ಬೆಕ್ಕಿನ ಒಡನಾಟ ಎಂಥಹುದು?

**X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

35. ನಾಗಿ ಮತ್ತು ಸೀರೆಯವನ ಪ್ರೀತಿಯ ಸೆಳೆತ ಎಂಥಹುದು ವಿವರಿಸಿ.
36. ನಾಗಿಯ ಪಾತ್ರದ ಮೂಲಕ ಯೌವ್ವನದ ಮನಸ್ಥಿತಿಯನ್ನು ಹೇಗೆ ಚಿತ್ರಿಸಿದ್ದಾರೆ?

## ಈ-ವಿಭಾಗ

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x2-4**

37. ಮೂಡಣ ಮತ್ತು ಪಡುವಣದಲ್ಲಿ ಯಾರು ಯಾರಿದ್ದಾರೆ?
38. ರೈತ ಗುಡಿಯಿಂದ ಏನೇನು ತಂದಿದ್ದಾನೆ?
39. ಶಿವಗುಡಿಗೆ ಶಿವನನ್ನು ಸೇರಿಸಬೇಕಾದರೆ ಏನೇನಿರಬೇಕು?

**XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **2x3-6**

40. ಹುಟ್ಟುಗುಣ ಸುಟ್ಟರೂ ಹೋಗುವುದೆ?
41. ಅಂಜದಿರು, ಸೋದರನೆ ನಾ ನಿನ್ನ ಬಂಧು.
42. ಜಗದ ಕಣ್ಣೆ ಬಾ ಬಾ.

**XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

43. ಭೂದೇವಿಯ ಉಷಃಕಾಲದ ಚಿತ್ರಣವನ್ನು ಚಿತ್ರಿಸಿ.
44. ಕಾಯಕ ತತ್ತ್ವದ ಮಹತ್ವವನ್ನು ಜಲಗಾರ ನಾಟಕದ ಹಿನ್ನೆಲೆಯಲ್ಲಿ ಬರೆಯಿರಿ.

## ಉ-ವಿಭಾಗ

**XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1x4-4**

45. ಶಿವನಂ ಕಂಡಾ ಭಕ್ತಂ ಕುಣಿಯಲು
    ಶಿವಭಕ್ತನ ಕೂಡಭವಂ ಕುಣಿಯಲು

46. ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ
    ಕಿರಣ ಸುಜ್ಞಾನ ಪ್ರಕಾಶ
    ಸುರರ ಮಕುಟಮಣಿ ರಂಜಿತ ಚರಣಾಬ್ಜ
    ಶರಣಾಗು ಪ್ರಥಮ ಜಿನೇಶ

**XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ.** **1x4-4**

47. ಬಲ್ಲವನೇ ಬಲ್ಲ ಬೆಲ್ಲದ ರುಚಿಯ

48. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

---